**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 534/2022

ಡಿ ಡಬ್ಲುಃ 03.

| | |
|---|---|
| ಸಾಕ್ಷಿದಾರರ ಹೆಸರು | ಕೆ ಪುಷ್ಪಾಂಗದನ |
| ತಂದೆಯ ಹೆಸರು | ಆರ್ ಕುಮಾರ |
| ವಯಸ್ಸು | 57 ವರ್ಷ |
| ಉದ್ಯೋಗ | ಚೀಫ್ ಎಕ್ಸಿಕ್ಯೂಟೀವ್ ಆಫೀಸರ್, ಎಲ್.ಎಸ್.ಎಂ.ಪಿ ಸೊಸೈಟಿ, ಮುಂಡಗೋಡ, |
| ವಾಸ್ತವ್ಯ | ನ್ಯಾಸರ್ಗಿ, ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **07.02.2026.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸ್ವ-ಪ್ರಮಾಣೀಕೃತ ಹೇಳಿಕೆಃ**

ಈ ಹಿಂದೆ ಎಲ್.ಎಸ್.ಎಂ.ಪಿ ಸೊಸೈಟಿಯಲ್ಲಿ ಮುಖ್ಯಕಾರ್ಯನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದ, ಶ್ರೀ ಶಂಭುಲಿಂಗಯ್ಯ ಬಾಲಿಗಟ್ಟಿಮಠರವರು ದಿನಾಂಕಃ 28.05.2022 ರಂದು ತೀರಿಕೊಂಡಿರುತ್ತಾರೆ. ನನಗೆ ಚಾರ್ಜ ಹ್ಯಾಂಡ್ ಓವರ ಆದ ನಂತರ, ಸದರಿ ಶಂಭುಲಿಂಗಯ್ಯರವರಿಗೆ ನೀಡಿದಂತಹ ಸೊಸೈಟಿಯ ಲಾಕರ್ ನ ಪಂಚನಾಮೆಯನ್ನು ಆಡಳಿತ ಕಮೀಟಿ ಅಧ್ಯಕ್ಷರು ಮತ್ತು ಸದಸ್ಯರು ಸೇರಿ ಜರುಗಿಸಿರುತ್ತೇವೆ. ಸದರಿ ಪಂಚನಾಮೆ ಮಾಡುವ ಕಾಲಕ್ಕೆ ಮೃತರ ಹೆಂಡತಿ ಶ್ರೀಮತಿ ರೇಣುಕಾ ಎಸ್ ಬಾಲಿಗಟ್ಟಿಮಠ ಮತ್ತು ಅವರ ಇಬ್ಬರು ಮಕ್ಕಳಾದ ಶ್ರೀಮತಿ ಉಮಾ ಎಂ ಗೌಳಿ ಮತ್ತು ಕುಮಾರಿ ನಿವೇದಿತಾ ಬಾಲಿಗಟ್ಟಿಮಠ ಹಾಜರಿದ್ದರು. ಮೃತರ ಲಾಕರನಲ್ಲಿ ವಿಮೆ ಬಾಂಡ್, ಆಧಾರ ಕಾರ್ಡ, ಪಾನ್ ಕಾರ್ಡ, ಕೆ.ಡಿ.ಸಿ.ಸಿ ಮತ್ತು ಸಿಂಡಿಕೇಟ್ ಬ್ಯಾಂಕಿನ ಪಾಸ್ ಬುಕ್ ಮತ್ತು 3 ಎಸ್.ಬಿ.ಐ ಬ್ಯಾಂಕಿನ ಖಾಲಿ ಚೆಕ್ ಗಳು ಇದ್ದವು. ಇವುಗಳೊಂದಿಗೆ ಸ್ವಲ್ಪ ನಗದು ಹಣ ಅಂದರೇ, ಸುಮಾರು 30,546/- ಮತ್ತು ಚಾವಿಯು ಸಹ ಇತ್ತು. ಆಡಳಿತ ಕಮೀಟಿಯವರ ನಿರ್ದೇಶನದಂತೆ, ಈ ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಮೃತರ ವಾರಿಸುದಾರರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ಸದರಿ ಪಂಚನಾಮೆಯ ಧೃಢೀಕೃತ ನಕಲನ್ನು ಹಾಜರುಪಡಿಸಿರುತ್ತಾರೆ.

ಸಾಕ್ಷಿಯು ಮೂಲ ದಾಖಲಾತಿಯನ್ನೂ ಸಹ ಹಾಜರುಪಡಿಸಿದ್ದು, ಧೃಢೀಕೃತ ನಕಲನ್ನು ಮೂಲ ದಾಖಲಾತಿಯೊಂದಿಗೆ ಪರಿಶೀಲಿಸಿ, ಸದರಿ ಪಂಚನಾಮೆಯನ್ನು **ನಿಡಿ.6** ಎಂದು ಗುರುತಿಸಲಾಯಿತು.

**ಸದರಿ ದಾಖಲಾತಿಯನ್ನು ನಿಶಾನೆಗೊಳಿಸಲು ಶ್ರೀಮತಿ ಜಿ.ಡಿ.ಕೆ ವಕೀಲರು ತಕರಾರು ಮಾಡಿದ್ದು, ಪ್ರತ್ಯೇಕವಾಗಿ ಏನು ತಕರಾರು ಎಂದು ಹೇಳದಿರುವ ಕಾರಣ, ಸದರಿ ದಾಖಲಾತಿಯು Relevant, admissible ಮತ್ತು Proper custody ಯಿಂದ ಬಂದ ಕಾರಣ, ಅದನ ಈ ಮೇಲಿನಂತೆ ನಿಶಾನೆಗೊಳಿಸಲಾಯಿತು.**

**ಸಾಕ್ಷಿಯು ಹಾಜರುಪಡಿಸಿದ ಮೂಲ ಕಡತವನ್ನು ಅವರಿಗೆ ಹಿಂದುರುಗಿಸಲಾಗಿರುತ್ತದೆ.**

**(ಈ ಹಂತದಲ್ಲಿ ಪಾಟೀ ಸವಾಲಿಗೆ   ಪಿರ್ಯಾದಿ ಪರ ವಕೀಲರು ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**